


ಗ್ರಂಥಾಲಯ, ಸಭಾಂಗಣ ಹಾಗೂ ಇತರ ಸೌಲಭ್ಯ ಕಲ್ಪಿಸಲಾಗಿದೆ.

'ಜಿಲ್ಲೆಯ ಬಡಜನರಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಸಂಜೀವಿನಿ ಆಸ್ಪತ್ರೆ ಆರಂಭಿಸಲಾಯಿತು. ಚಿಕಿತ್ಸೆ ಪಡೆದವರು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅತ್ಯಾಧುನಿಕ ಯಂತ್ರೋಪಕರಣ ಅಳವಡಿಸಿ, ತಜ್ಞ ವೈದ್ಯರಿಂದ ಚಿಕಿತ್ಸೆ ಕೊಡಿಸಲಾಗುತ್ತಿದೆ. ಸಂಸ್ಥೆ ಸಿಬ್ಬಂದಿಗೆ ಚಿಕಿತ್ಸಾ ವೆಚ್ಚದಲ್ಲಿ ಶೇಕಡಾ 50ರಷ್ಟು ರಿಯಾಯಿತಿ ನೀಡಲಾಗುತ್ತಿದೆ' ಎನ್ನುತ್ತಾರೆ ಸಂಜೀವಿನ ಸಹಕಾರಿ ಆಸ್ಪತ್ರೆ ಆಡಳಿತ ಮಂಡಳಿ ಗೌರವಾಧ್ಯಕ್ಷ ಗಿರೀಗೌಡ.

'ಸಂಸ್ಥೆ ವತಿಯಿಂದ ಗ್ರಾಮೀಣ ಪ್ರದೇಶದಲ್ಲಿ ವರ್ಷಕ್ಕೆ ಎರಡು ಆರೋಗ್ಯ ಮೇಳ ಆಯೋಜಿಸಿ, ಉಚಿತ ಔಷಧ ನೀಡಲಾಗುತ್ತಿದೆ. ಇತರೆ ಖಾಸಗಿ ಆಸ್ಪತ್ರೆಗಳಿಗೆ ಹೋಲಿಸಿದರೆ ಸಂಜೀವಿನಿ ಆಸ್ಪತ್ರೆಯಲ್ಲಿ ಚಿಕಿತ್ಸಾ ವೆಚ್ಚ ಕಡಿಮೆ. ಕಡು ಬಡವರಿಗೆ ಉಚಿತ ಚಿಕಿತ್ಸೆ ನೀಡಲಾಗಿದೆ' ಎನ್ನುತ್ತಾರೆ ಆಸ್ಪತ್ರೆಯ ಮ್ಯಾನೇಜರ್ ಸಂತೋಷ್. ಅಂದಹಾಗೆ 'ಸಂಜೀವಿನಿ'ಯ ಸೇವೆಗೆ ರಾಜ್ಯ ಸರ್ಕಾರದ 'ಸಹಕಾರಿ ರತ್ನ' ಪ್ರಶಸ್ತಿ ದೊರೆತಿದೆ.

■ **ಕೆ.ಎಸ್. ಸುನಿಲ್**



ಆಸ್ಪತ್ರೆ ಸೊಸೈಟಿಯ ನಿರ್ದೇಶಕ ಹರಿದಾಸ್ ಸರಳವಾಗಿ ವಿವರಿಸುತ್ತಾರೆ:

'ಸಹಕಾರಿ ಆಸ್ಪತ್ರೆಯಲ್ಲಿ ತೀರಾ ಅಗತ್ಯದ ಚಿಕಿತ್ಸೆ ಮಾತ್ರ ನೀಡಲಾಗುತ್ತದೆ. ವ್ಯವಸ್ಥೆಯನ್ನು ತೀರಾ ಗೋಜಲು ಮಾಡದೆ ಸರಳವಾದ ವ್ಯವಸ್ಥೆಯನ್ನು ಅನುಸರಿಸಲಾಗುತ್ತದೆ. ಉದಾಹರಣೆಗೆ, ಕುಂಬಳೆಯಲ್ಲಿರುವ ಸಹಕಾರಿ ಆಸ್ಪತ್ರೆಯಲ್ಲಿ ಸಹಜ ಹೆರಿಗೆಗೆ ಆರು ಸಾವಿರ ರೂಪಾಯಿ ಶುಲ್ಕ ವಿಧಿಸಿದರೆ, ಸಿಸೇರಿಯನ್ ಹೆರಿಗೆಗೆ 10 ಸಾವಿರ ರೂಪಾಯಿ ಶುಲ್ಕ ವಿಧಿಸಲಾಗುತ್ತದೆ. ಆದರೆ ಖಾಸಗಿ ಆಸ್ಪತ್ರೆಗಳಲ್ಲಿ ನೂರಾರು ತಪಾಸಣೆಗಳನ್ನು ಮಾಡುವ, ವೈದ್ಯರಿಗೆ 20 ಲಕ್ಷ ಸಂಬಳ ರೂಪಾಯಿ ನಿಗದಿ ಮಾಡುವ ಪ್ರಕ್ರಿಯೆಯಿಂದ ಒಟ್ಟು ವ್ಯವಸ್ಥೆಯೇ ಜನರಿಂದ ದೂರ ಹೋಗಿಬಿಡುತ್ತದೆ. ವೈದ್ಯರಿಗೆ ನಿಗದಿ ಮಾಡಿದ ಭಾರೀ ಸಂಬಳ ಕೊಡಬೇಕಾದರೆ ನಿಗದಿತ ಸಂಖ್ಯೆಯ ರೋಗಿಗಳು ಆಸ್ಪತ್ರೆಗೆ ದಾಖಲಾಗಲೇಬೇಕು. ಸರಾಸರಿ ನಿಗದಿತ ಸಂಖ್ಯೆಯ ಶಸ್ತ್ರಚಿಕಿತ್ಸೆಗಳು ನಡೆಯಲೇಬೇಕು. ಅದಕ್ಕಾಗಿ ವೈದ್ಯಕೀಯ ಕ್ಯಾಂಪ್‌ಗಳನ್ನು ಮಾಡಿ ರೋಗಿಗಳನ್ನು ಗುರುತಿಸಿ ತರಬೇಕಾಗುತ್ತದೆ. ಚಿಕ್ಕಪುಟ್ಟ ಸಮಸ್ಯೆಯನ್ನೂ ದೊಡ್ಡದಾಗಿ ತೋರಿಸಿ ಭಾರೀ ಶುಲ್ಕವನ್ನು ವಿಧಿಸುವುದು ಅನಿವಾರ್ಯವಾಗುತ್ತದೆ. ಒಟ್ಟಿನಲ್ಲಿ ರೋಗಿಯು ವೈದ್ಯರ ಮೇಲಿನ ನಂಬಿಕೆಯನ್ನೇ ಕಳೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಆಗುತ್ತದೆ'.

ಮಂಗಳೂರಿನಲ್ಲಿ ಸಹಕಾರಿ ಆಸ್ಪತ್ರೆಯೊಂದನ್ನು ನಿರ್ಮಿಸುವ ಉದ್ದೇಶದಿಂದ ಸಾಕಷ್ಟು ಕೆಲಸ ಮಾಡಿರುವ ಹರಿದಾಸ್ ಅವರು, ಸಹಕಾರಿ ಆಸ್ಪತ್ರೆಯ ಹಿನ್ನೆಲೆಯಲ್ಲಿ ಸೇವಾ ಮನೋಭಾವ ಅತ್ಯಂತ ಮುಖ್ಯವಾದುದು ಎನ್ನುವುದನ್ನು ಒತ್ತಿಹೇಳುತ್ತಾರೆ. 'ಸಹಕಾರಿ ಆಸ್ಪತ್ರೆಯನ್ನು ನಿರ್ಮಿಸುವ ಉದ್ದೇಶ ಹೊಂದಿರುವವರು ಸೇವಾ ಮನೋಭಾವ ಹೊಂದಿರಬೇಕು. ನಮ್ಮ ದೇಶದಲ್ಲಿ ಬಡಜನರನ್ನು ತಲುಪುವಂತಹ ಉತ್ತಮ ವ್ಯವಸ್ಥೆ ನಿರ್ಮಾಣ ಆಗಬೇಕು ಎಂಬ ಆಶಯ ಅವರ ಹೃದಯದಲ್ಲಿರಬೇಕು. ಸೇವಾ ಮನೋಭಾವ ಮತ್ತು ಬಡವರನ್ನು ತಲುಪುವ ಆಶಯಗಳು ಇಲ್ಲದೇ ಇದ್ದರೆ ಯಾವುದೇ ಸಹಕಾರಿ ಚಟುವಟಿಕೆ ಯಶಸ್ವಿಯಾಗುವುದಿಲ್ಲ. ಲಾಭವನ್ನು ಆರ್ಥಿಕತೆಯ ದೃಷ್ಟಿಯಿಂದಲೇ ನೋಡುವುದು ಸರಿಯಲ್ಲ. ಆರೋಗ್ಯಕರವಾದ ಸಮಾಜವು ಲಾಭವಲ್ಲದೆ ಮತ್ತೇನು?' ಎನ್ನುವ ಅಭಿಪ್ರಾಯ ಅವರದು.

ಸಹಕಾರಿ ಆಸ್ಪತ್ರೆಗಳ ಯಾದಿಯಲ್ಲಿ ಮುಂಬಯಿಯ ಶುಶ್ರೂಷಾ ಸಹಕಾರಿ ಸೊಸೈಟಿ ಆಸ್ಪತ್ರೆ ಪ್ರಮುಖವಾದುದು. ಮುಂಬೈಯಂತಹ ಮಹಾನಗರದ ಮಟ್ಟಿಗೆ ಅತ್ಯಂತ ಕಡಿಮೆ ಶುಲ್ಕಕ್ಕೆ ಚಿಕಿತ್ಸೆ ನೀಡುವ ಆಸ್ಪತ್ರೆ ಇದು. ಗ್ರೇಟರ್ ಮುಂಬೈ ಮತ್ತು ಥಾಣೆ ಜಿಲ್ಲೆಯ ಜನಸಾಮಾನ್ಯರು ಈ ಸೊಸೈಟಿಯ ಸದಸ್ಯತ್ವ ಪಡೆಯಬಹುದು. ಮುಂಬೈಯ ಶಿವಾಜಿ ಪಾರ್ಕ್‌ನಲ್ಲಿರುವ ಈ ಆಸ್ಪತ್ರೆಯನ್ನು 1966ರಲ್ಲಿ ಡಾ. ವಿ.ಎಸ್. ರಾನಡೈವ್ ಅವರು ಸ್ಥಾಪಿಸಿದರು. ಬಡವರಿಗೆ ಮತ್ತು ಕಾರ್ಮಿಕರಿಗೆ ಜೀವದಾನ ಮಾಡುವ